# ಕಣ್ಣಿಗೆ ಕಾಣದ ಎವರೆಸ್ಟ್ ಅಪ್ಪಿಕೊಂಡ ಚಾಂಜಿನ್

■ ರಾಹುಲ ಬೆಳಗಲಿ





'ಎರಡೂ ಕಣ್ಣುಗಳಿದ್ದು, ದೃಷ್ಟಿಯು ಸ್ಪಷ್ಟವಾಗಿ ಕಾಣುವ ಹಲವರಿಗೆ ಹಿಮಾಲಯದ ಎವರೆಸ್ಟ್ ಪರ್ವತ ಏರಲು ಆಗುವುದಿಲ್ಲ. ಆದರೆ, ನನಗೆ ದೃಷ್ಟಿ ದೋಷವಿದೆ. ಯಾವುದೂ ಕೂಡ ಸ್ಪಷ್ಟವಾಗಿ ಕಾಣುವುದಿಲ್ಲ. ಪರ್ವತದ ಎತ್ತರ ಮತ್ತು ದುರ್ಗಮ ಹಾದಿಯ ಬಗ್ಗೆ ಕಲ್ಪನೆಯೂ ಇಲ್ಲ. ಕನಸು ನನಸು ಮಾಡಬೇಕು ಎಂಬುದಷ್ಟೇ ನನ್ನ ಗುರಿಯಾಗಿತ್ತು. ಅದರಂತೆ ತಯಾರಿ ನಡೆಸಿ, ಹಲವು ಸವಾಲುಗಳನ್ನು ಎದುರಿಸಿದೆ. ಜಗತ್ತಿನ ಎತ್ತರದ ಶಿಖರವನ್ನೇ ಏರಿಬಿಟ್ಟೆ'.

ಹೀಗೆ ಹೇಳುವಾಗ ಚಾಂಜಿನ್ ಆಂಗ್ಮೊ ಅವರ ಮೊಗದಲ್ಲಿ ಸಂಭ್ರಮ ಇಣುಕುತಿತ್ತು. ದೈತ್ಯ ಪರ್ವತ 'ಮೌಂಟ್ ಎವರೆಸ್ಟ್' ಏರಿದ ಮೊದಲ ಭಾರತೀಯ ಅಂಧ ಮಹಿಳೆ ತಾವು ಎಂಬ ಸಂಭ್ರಮಕ್ಕಿಂತ ತಾವು ಕಂಡ ಕನಸು ನನಸಾಯಿತು ಎಂಬ ಸಾರ್ಥಕಭಾವ ಅವರಲ್ಲಿತ್ತು. ಶ್ರಮ, ಶ್ರದ್ಧೆ, ಬದ್ಧತೆ, ಪ್ರಾಮಾಣಿಕತೆ ಎಲ್ಲವನ್ನೂ ಅದು ಒಳಗೊಂಡಿತ್ತು.

ಹಿಮಾಚಲ ಪ್ರದೇಶದ ಕಿನಾರ್ ಜಿಲ್ಲೆಯ ಚಾಂಗೋ ಎಂಬ ಕುಗ್ರಾಮದ ಚಾಂಜಿನ್, ಎಂಟನೇ ವಯಸ್ಸಿನಲ್ಲೇ ದೃಷ್ಟಿ ಕಳೆದುಕೊಂಡರು. ಪರ್ವತಗಳು ಹತ್ತುವುದಿರಲಿ, ಆಗಸವನ್ನು ಮುತ್ತಿಡುವ ಬೆಟ್ಟಗಳ ರಾಶಿಯನ್ನು ನೋಡುವ ಮತ್ತು ಅರಿಯುವ ಮೊದಲೇ, ಅಂಧತ್ವ ಅವರಿಗೆ ಸಂಗಾತಿಯಾಯಿತು. ಕತ್ತಲಿನಲ್ಲೇ ಬದುಕಿನ ಬೆಳಕನ್ನು ಕಾಣಬೇಕಾಯಿತು.

ಆದರೆ, ಅದಕ್ಕೆ ಅವರು ಕಿಂಚಿತ್ತೂ ಅಧೀರರಾಗಲಿಲ್ಲ. ಖಿನ್ನತೆ ಆವರಿಸಿಕೊಳ್ಳಲು ಅವಕಾಶ ನೀಡಲಿಲ್ಲ. ಅಷ್ಟೇ ಅಲ್ಲ, ಮುಂದಿನ ಗುರಿ ಮತ್ತು ಯೋಜನೆ ಏನಾಗಿರಬೇಕು ಎಂಬುದನ್ನು ಯೋಚಿಸಲು ಕೂಡ ನಿಲ್ಲಿಸಲಿಲ್ಲ. 'ದೃಷ್ಟಿ ದೋಷ ಇದ್ದರೇನಂತೆ, ಅದು ನನ್ನ ಬದುಕಿನ ಚೈತನ್ಯವೇ ಹೊರತು ದೌರ್ಬಲ್ಯ ಅಲ್ಲ. ಮಾನಸಿಕ ಮತ್ತು ದೈಹಿಕ ಸಾಮರ್ಥ್ಯ, ಆತ್ಮವಿಶ್ವಾಸಕ್ಕೆ ಧಕ್ಕೆ ಆಗಿಲ್ಲ. ನಾನು ಎಲ್ಲಾ ಸಾಮಾನ್ಯರಂತೆ ಬದುಕುವೆ' ಎಂದು ಖಡಕ್ ಆಗಿ ಹೇಳಿದರು.

ಚಾಂಜಿನ್ ಅವರ ಸಾಹಸಿ ವ್ಯಕ್ತಿತ್ವ ಬರೀ ಪರ್ವತಾರೋಹಿಗೆ ಸೀಮಿತ ಆಗುವುದಿಲ್ಲ. ಅವರು ಕ್ರೀಡಾಪಟುವೂ ಹೌದು. ದೀರ್ಘಕಾಲದ ಸೈಕ್ಲಿಂಗ್ ಮಾಡುವ ಅವರು, ಈಜಿನಲ್ಲಿ ಚಿನ್ನದ ಪದಕಗಳನ್ನು ಗೆದ್ದಿದ್ದಾರೆ. ಜುಡೋ ಪಟು, ಮರಥಾನ್ ಓಟಗಾರ್ತಿ, ಫುಟ್‌ಬಾಲ್ ಆಟಗಾರ್ತಿಯೂ ಹೌದು. ದೆಹಲಿ ವಿಶ್ವವಿದ್ಯಾಲಯದ ಸ್ನಾತಕೋತ್ತರ ಪದವೀಧರರು ಕೂಡ ಆಗಿದ್ದಾರೆ. ಇವೆಲ್ಲದರ ಜೊತೆಗೆ, ಬ್ಯಾಂಕ್ ಉದ್ಯೋಗಿ. 'ಯಾವುದೆಲ್ಲ ಕ್ಷೇತ್ರಗಳಲ್ಲಿ ನೀವು ಸಾಧನೆ ಮಾಡಿದ್ದೀರಿ ಎಂಬುದಕ್ಕಿಂತ, ಇನ್ನೂ ಯಾವುದೆಲ್ಲ ಕ್ಷೇತ್ರದಲ್ಲಿ ಸಾಧನೆ ಮಾಡುವುದು ಬಾಕಿ ಉಳಿದಿದೆ' ಎಂದು ಕೇಳುವ ಮಟ್ಟಕ್ಕೆ ಅವರು ಸಾಧನೆಯ ಎತ್ತರಕ್ಕೆ ಬೆಳೆದಿದ್ದಾರೆ.

ಕಳೆದ ವರ್ಷ 2025ರ ಮೇ ತಿಂಗಳಲ್ಲಿ ನಿವೃತ್ತ ಕರ್ನಲ್ ರೋಮಿಲ್ ಬರ್ತವಾಲ್ ಮತ್ತು ಇಬ್ಬರು ಶೇರ್ಪಾಗಳೊಂದಿಗೆ ಎವರೆಸ್ಟ್ ಪರ್ವತ ಏರತೊಡಗಿದಾಗ, ಚಾಂಜಿನ್ ಅವರಿಗೆ ಎಂತಹ ಅಪರೂಪದ ಸಾಧನೆ ಮಾಡುತ್ತಿರುವುದಾಗಿ ಸಣ್ಣ ಕಲ್ಪನೆಯೂ ಇರಲಿಲ್ಲ. ಪರ್ವತದ ತುತ್ತತುದಿ ಎಂದರೆ 8,848 ಮೀಟರ್ ಎತ್ತರದಲ್ಲಿ ದೇಶದ ತ್ರಿವರ್ಣ ಧ್ವಜ ಹಾರಿಸಿದಾಗ, ಹೆಮ್ಮೆಯಿಂದ ಅವರ ಕಣ್ಣಂಚಿನಲ್ಲಿ ನೀರು ಬಂದಿತ್ತು. ನಿರೀಕ್ಷಿತ ಸೌಲಭ್ಯಗಳಿರದ ಗ್ರಾಮದ ಪುಟ್ಟ ಮನೆಯಲ್ಲಿದ್ದ ಅವರ ತಂದೆ ಅಮರ್ ಚಾಂದ್, 'ಚಾಂಜಿನ್ ನನ್ನ ಹೆಮ್ಮೆಯ ಮಗಳು. ಅವಳು ದೇಶಕ್ಕೆ ಮತ್ತು ಕುಟುಂಬಕ್ಕೆ ಕೀರ್ತಿ ತಂದಳು' ಎಂದು ಸಂಭ್ರಮಿಸಿದ್ದರು. ಆಪ್ತರು ಮತ್ತು ನೆರೆಹೊರೆಯವರೊಂದಿಗೆ ಸಂತಸ ಹಂಚಿಕೊಂಡಿದ್ದರು.

ಪರ್ವತ ಏರುವುದು ಎಂದರೆ ಸುಮ್ಮನೆ ಅಲ್ಲ. ಒಂದೇ ದಿನದಲ್ಲಿ ಅಥವಾ ರಾತ್ರಿಯಲ್ಲಿ ಯಶಸ್ಸು, ಖ್ಯಾತಿ ಗಳಿಸಲು ಆಗಲ್ಲ. ಇದರ ಬಗ್ಗೆ ಸ್ಪಷ್ಟ ಅರಿವು ಹೊಂದಿದ್ದ ಚಾಂಜಿನ್ ಒಮ್ಮೆಲೇ ಈ ಸಾಹಸಕ್ಕೆ ಕೈ ಹಾಕಲಿಲ್ಲ. 2016ರಲ್ಲಿ ಅವರ ಅಟಲ್ ಬಿಹಾರಿ ವಾಜಪೇಯಿ ಪರ್ವತಾರೋಹಣ ಸಂಸ್ಥೆಯಲ್ಲಿ ತರಬೇತಿ ಪಡೆದರು. 'ಸಿಯಾಚಿನ್ ನೀರ್ಗಲ್ಲು' ಎಂಬ ಯುದ್ಧಪೀಡಿತ ಪ್ರದೇಶದಲ್ಲಿ 'ಆಪರೇಷನ್ ಬ್ಲ್ಯೂ ಫ್ರೀಡಂ' ಎಂಬ ತಂಡದಲ್ಲಿ ಸದಸ್ಯೆಯಾಗಿ ಸೇರ್ಪಡೆಯಾದರು. ಕ್ರಮೇಣ ಅವರು ಹಿಮಾಲಯದ ಸುತ್ತಮುತ್ತಲ ಪ್ರದೇಶದಲ್ಲಿನ 5 ಸಾವಿರದಿಂದ 6 ಸಾವಿರ ಮೀಟರ್ ಎತ್ತರವಿರುವ ಪರ್ವತಗಳನ್ನು ಏರಿದರು. ಪರ್ವತಾರೋಹಿಯಾಗಿ ಕೊಂಚ ಅನುಭವಿಯಾದ ಮೇಲೆ ಎವರೆಸ್ಟ್‌ನತ್ತ ಕಣ್ಣು ನೆಟ್ಟರು.

'ಬದುಕಿಗೆ ದೃಷ್ಟಿಗಿಂತ ದೃಷ್ಟಿಕೋನ ಮುಖ್ಯ ಎಂದು ಗಾಢವಾಗಿ ನಂಬಿದವಳು ನಾನು. ಹೀಗಾಗಿ ನನಗೆ ಪರ್ವತ ಏರುವುದು ಸೇರಿ ವಿವಿಧ ಚಟುವಟಿಕೆಗಳಲ್ಲಿ ಭಾಗಿಯಾಗಲು ಸಾಧ್ಯವಾಯಿತು. ಒಂದೂ ವೇಳೆ ದೃಷ್ಟಿಕೋನ ಮತ್ತು ಆತ್ಮವಿಶ್ವಾಸವೇ ಇಲ್ಲದಿದ್ದರೆ, ಬದುಕುವುದು ಮತ್ತು ಬದುಕು ಕಟ್ಟಿಕೊಳ್ಳುವುದು ಕೂಡ ಕಷ್ಟವಿತ್ತು' ಎಂದು ಹೇಳುವ ಚಾಂಜಿನ್ ಅವರ ವಯಸ್ಸು 29. ಇಷ್ಟೆಲ್ಲ ಸಾಧನೆ ಮಾಡಿದರೂ, 'ಇನ್ನೂ ಸಾಧಿಸಬೇಕಿದೆ. ಇನ್ನಷ್ಟು ಗುರಿಗಳು ಮುಟ್ಟಬೇಕಿದೆ' ಎಂದು ನಗುತ್ತಾ ಹೇಳುತ್ತಾರೆ. ■

Printed and Published by B.A. Ravi on behalf of The Printers (Mysore) Private Ltd. Printed at M/s Rajhan's Enterprises, No.134, 4th Main Road, Industrial Town, Rajajinagar, Bangalore - 560044 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bengaluru - 560074. Editor: K.N. TILAK KUMAR.
Editorial Office: 75, M.G Road, Bengaluru-560 001 E-mail:editorsu@sudha.co.in. Phone: 080 45557333, Editorial:45557262,
Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65